# ಇದೆಂಥಾ ವಿದಾಯ

**ಭಾರತ ಕ್ರಿಕೆಟ್‌ನಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದಕ್ಕೆ ಆರ್. ಅಶ್ವಿನ್ ನಿವೃತ್ತಿ ಕನ್ನಡಿ ಹಿಡಿಯುತ್ತಿದೆ. ಸಾಧಕನೊಬ್ಬ ಹೀಗೆ ಅಚಾನಕ್ ನಿವೃತ್ತಿ ಘೋಷಿಸಿ ಹೊರನಡೆಯಲು ಬಿಡುವಷ್ಟು ಬಡತನವನ್ನು ಶ್ರೀಮಂತ ಕ್ರಿಕೆಟ್ ಮಂಡಲಿಯ ಚಾವಡಿ ಪ್ರದರ್ಶಿಸಕೂಡದು.**

■ **ವಿಶಾಖ ಎನ್.**



ವಿರಾಟ್ ಕೊಹ್ಲಿ ಪಕ್ಕದಲ್ಲಿ ಕುಳಿತುಕೊಂಡು ಡಿಸೆಂಬರ್ 18ರಂದು ರವಿಚಂದ್ರನ್ ಅಶ್ವಿನ್ ಗಂಭೀರವಾಗಿ ಮಾತನಾಡುತ್ತಿದ್ದರು. ಆಸ್ಟ್ರೇಲಿಯಾ ವಿರುದ್ಧದ ಮೂರನೇ ಟೆಸ್ಟ್ ಪಂದ್ಯ ಬ್ರಿಸ್ಬೇನ್‌ನಲ್ಲಿ ಮಳೆಯಿಂದಾಗಿ ಇನ್ನೇನು ಡ್ರಾ ಆಗುವುದರಲ್ಲಿತ್ತು. ಪಂದ್ಯ ಡ್ರಾ ಎಂದು ಅಧಿಕೃತವಾಗಿ ಅಂಪೈರ್ ಘೋಷಿಸಿದ ಕೆಲವೇ ನಿಮಿಷಗಳಲ್ಲಿ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪ್ರಕಟಿಸಿದರು. ಸರಣಿಯೊಂದರ ನಡುವೆ ದಿಢೀರನೆ ಹೀಗೆ ನಿವೃತ್ತಿ ಪ್ರಕಟಿಸಿದ್ದು ಖುದ್ದು ಅಶ್ವಿನ್ ತಂದೆಯವರಿಗೂ ಅಚ್ಚರಿ ತಂದಿದೆ.

ಅಶ್ವಿನ್ ತಮ್ಮ ಹೆಸರಿನ ಪಕ್ಕ ಅವರ ತಂದೆಯ ಹೆಸರನ್ನೂ ಸೇರಿಸಿಕೊಂಡಿದ್ದಾರೆ; ರವಿಚಂದ್ರನ್ ಎಂದು. ರವಿಚಂದ್ರನ್ ಖುದ್ದು ಕ್ಲಬ್ ಕ್ರಿಕೆಟ್‌ನಲ್ಲಿ ವೇಗದ ಬೌಲರ್ ಆಗಿದ್ದವರು. ಮಗ ತಮಗಿಂತ ದೊಡ್ಡ ಕ್ರಿಕೆಟಿಗನಾಗಬೇಕು ಎನ್ನುವುದು ಅವರ ಸಹಜ ಕನಸಾಗಿತ್ತು. ಅಂದುಕೊಂಡಂತೆಯೇ ಮಗನನ್ನು ಅಂತರರಾಷ್ಟ್ರೀಯ ಕ್ರಿಕೆಟಿಗನನ್ನಾಗಿಸಿದರು. 'ಮಗನ ಆತ್ಮಗೌರವಕ್ಕೆ ಏನೋ ಪೆಟ್ಟುಬಿದ್ದಿರಬೇಕು' ಎಂಬ ಅವರ ಅನುಮಾನದ ನುಡಿ ಈಗ ಕಾಡುತ್ತಿದೆ.

ಕಪಿಲ್ ದೇವ್ ಕೂಡ ಅಶ್ವಿನ್ ಅವರಿಗೆ ಗೌರವಯುತವಾಗಿ ವಿದಾಯ ಹೇಳಬೇಕಿತ್ತು ಎಂದಿದ್ದರಲ್ಲಿ ಅರ್ಥವಿದೆ. ಎಲ್ಲಕ್ಕಿಂತ ಮುಖ್ಯವಾಗಿ ವೀಕ್ಷಕ ವಿವರಣೆಗಾರ ಹರ್ಷ ಭೋಗ್ಲೆ ಅವರು ಪುಟ್ಟ ವಿಡಿಯೊದಲ್ಲಿ ಅಶ್ವಿನ್ ಆಟದ ವೈಖರಿಯನ್ನಷ್ಟೇ ಅಲ್ಲದೆ ಅವರ ಸ್ವಭಾವವನ್ನೂ ಮೆಲುಕುಹಾಕಿದ್ದಾರೆ. ಹೀಗೆ ನಿವೃತ್ತಿ ಘೋಷಿಸಿದ ಬಗೆಗೆ ಅವರ ಮಾತಿನಲ್ಲೂ ಬೇಸರವಿತ್ತು.

ಚೆನ್ನೈನ ಸೇಂಟ್ ಬೆಡೇಸ್ ಆಂಗ್ಲೋ ಇಂಡಿಯನ್ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಕಲಿಯುವಾಗ ಸಿ.ಕೆ. ವಿಜಯ್, ಚಂದ್ರ ಎಂಬಿಬ್ಬರು ತರಬೇತುದಾರರು ಅಶ್ವಿನ್ ಕ್ರಿಕೆಟ್ ಉತ್ಸಾಹವನ್ನು ಗುರುತಿಸಿ, ನೀರೆರೆಯದೇ ಹೋಗಿದ್ದರೆ ಅವರು ಈ ರೂಪದಲ್ಲಿ ನಮಗೆ ಸಿಗುತ್ತಿರಲಿಲ್ಲ.

ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಿದ್ದು 2010ರಲ್ಲಿ. ಮರುವರ್ಷವೇ ವಿಶ್ವಕಪ್ ಕ್ರಿಕೆಟ್ ತಂಡದ ಸದಸ್ಯರಾದದ್ದು ಅದೃಷ್ಟ. ವೆಸ್ಟ್‌ಇಂಡೀಸ್ ಎದುರು ಮೊದಲ ಪ್ರವಾಸದಲ್ಲೇ ಟೆಸ್ಟ್‌ನಲ್ಲಿ ಶತಕ ಗಳಿಸಿ ಬ್ಯಾಟಿಂಗ್ ಬಲವನ್ನು ರುಜುವಾತು ಪಡಿಸಿದ ಅವರು, 2013ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಭಾರತ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. 5 ಪಂದ್ಯಗಳಲ್ಲಿ ಅವರು ಆಗ ಪಡೆದ 8 ವಿಕೆಟ್‌ಗಳು ತುಂಬಾ ಮುಖ್ಯ ಆಗಿದ್ದವು. 2016ರಲ್ಲಿ ಅತಿ ಹೆಚ್ಚು ಸರಣಿ ಸರ್ವೋತ್ತಮ ಪ್ರಶಸ್ತಿ ಗಳಿಸಿದ್ದ ವೀರೇಂದ್ರ ಸೆಹ್ವಾಗ್ ದಾಖಲೆಯನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಮೀರಿದ ಅಶ್ವಿನ್, ಚಿಕ್ಕಪ್ರಾಯದಲ್ಲೇ ಅರ್ಜುನ ಪ್ರಶಸ್ತಿಗೂ ಭಾಜನರಾದವರು. ತಮಿಳುನಾಡು ತಂಡ ರಣಜಿ ಟ್ರೋಫಿ ಎತ್ತಿಹಿಡಿದಾಗ ಅವರಿಗಿನ್ನೂ 20 ವರ್ಷ.

ಅಶ್ವಿನ್ ಅವರನ್ನು ಹರ್ಷ ಭೋಗ್ಲೆ 'ಅನ್ವೇಷಕ' ಎಂಬ ವಿಶೇಷಣ ಬಳಸಿ ಗುರುತಿಸಿದ್ದಾರೆ. ಬೌಲಿಂಗ್ ಮಾಡುವಾಗ ಒಂದು ಎಸೆತ ಒಳಕ್ಕೆ ಬರುವಂತೆ, ಇನ್ನೊಂದು ಹೊರಕ್ಕೆ ಹೋಗುವಂತೆ ಮಾಡಬಲ್ಲ ಜಾಣ ಮಾರ್ಪಾಟನ್ನು ಆಗಿಂದಾಗಲೇ ಮಾಡುವ ಕುಶಲವನ್ನು ಗಮನಿಸಿ, ಅವರು ಅಂತಹ ವಿಶೇಷಣ ಕೊಟ್ಟಿದ್ದು. ಅವರ ಕೇರಂ ಬಾಲ್ ಅಂತೂ ದೊಡ್ಡ ಶಸ್ತ್ರವಾಗಿ ಬಳಕೆಯಾಯಿತು.

ಅಶ್ವಿನ್ ಮೊದಲು ಬ್ಯಾಟ್ಸ್‌ಮನ್ ಆಗಿ ಕ್ರಿಕೆಟ್ ಆಡತೊಡಗಿದ್ದರು. ಆಮೇಲೆ ಸ್ಪಿನ್ನರ್ ಆದದ್ದು. ಆಫ್ ಸ್ಪಿನ್ನರ್ ಆಗಿ ಅವರ ಸ್ಥಾನ ತುಂಬಬಲ್ಲಷ್ಟು ಕುಶಲಿ ಸದ್ಯಕ್ಕೆ ಭಾರತ ತಂಡದಲ್ಲಿ ಯಾರೂ ಇಲ್ಲ ಎಂದು ರವಿ ಶಾಸ್ತ್ರಿ ಕೂಡ ಇತ್ತೀಚೆಗೆ ಹೇಳಿದ್ದರು.

ಕಳೆದ ನಾಲ್ಕೈದು ವರ್ಷಗಳಿಂದ ಅಶ್ವಿನ್ ಭಾರತಕ್ಕೆ ಸಹಜ ಆಯ್ಕೆ ಎಂದೇನೂ ಅನಿಸುತ್ತಿರಲಿಲ್ಲ. 2021ರಲ್ಲಿ ಆಸ್ಟ್ರೇಲಿಯಾ ಪ್ರವಾಸ ಮಾಡಿದ ತಂಡದಲ್ಲಿ ಅವರು ಗಮನಾರ್ಹವಾಗಿ ಆಡಿದರು. ಆದರೂ ಆಗ ಅಷ್ಟೂ ಪಂದ್ಯಗಳಲ್ಲಿ ಆಡಲು ಅವಕಾಶ ಸಿಕ್ಕಿದ್ದು ಆಲ್‌ರೌಂಡರ್ ರವೀಂದ್ರ ಜಡೇಜಾ ಗಾಯಗೊಂಡಿದ್ದರಿಂದ. ಬರಬರುತ್ತಾ ಸ್ಪಿನ್ನರ್‌ಗಳು ಆಲ್‌ರೌಂಡರ್‌ಗಳಾದರಷ್ಟೇ ಉಳಿಗಾಲ ಎಂಬ ಸಂದೇಶವೊಂದು ರವಾನೆಯಾಗುತ್ತಿದೆಯೇ ಎನ್ನುವ ಅನುಮಾನಕ್ಕೂ ಇದು ಕಾರಣವಾಗಿದೆ. ವಾಷಿಂಗ್ಟನ್ ಸುಂದರ್ ಆಯ್ಕೆ ಇದನ್ನೇ ಸಮರ್ಥಿಸುತ್ತದೆ.

ಅಶ್ವಿನ್ ಆಸ್ಟ್ರೇಲಿಯಾ ಎದುರು ನಡೆದ ಪಿಂಕ್ ಬಾಲ್ ಕ್ರಿಕೆಟ್ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಇಪ್ಪತ್ತು ಚಿಲ್ಲರೆ ರನ್‌ಗಳನ್ನು ಹೊಡೆದಿದ್ದರು. ಬೌಲಿಂಗ್‌ಗಿಂತ ಹೆಚ್ಚಾಗಿ ಬ್ಯಾಟಿಂಗ್‌ನಲ್ಲೂ ತಮ್ಮ ಸಾಮರ್ಥ್ಯ ರುಜುವಾತುಪಡಿಸಬೇಕಾದ ಪರಿಸ್ಥಿತಿ ಬಂದಿರುವುದು ಈ ಕಾಲದ ಚೋದ್ಯವೆಂದೇ ಕೆಲವರು ವಿಶ್ಲೇಷಿಸುತ್ತಿದ್ದಾರೆ.

ಇದುವರೆಗೆ 106 ಟೆಸ್ಟ್‌ಪಂದ್ಯಗಳಲ್ಲಿ ಅಶ್ವಿನ್ 537 ವಿಕೆಟ್‌ಗಳನ್ನು ಪಡೆದಿದ್ದಾರೆ. ಅನಿಲ್‌ಕುಂಬ್ಳೆ ಅವರನ್ನು ಹೊರತುಪಡಿಸಿದರೆ ಇಷ್ಟು ವಿಕೆಟ್‌ಗಳನ್ನು ಪಡೆದ ಇನ್ನೊಬ್ಬ ಬೌಲರ್ ಅವರೇ. 116 ಏಕದಿನ ಪಂದ್ಯಗಳಲ್ಲಿ 156 ವಿಕೆಟ್‌ಗಳೂ ಅವರಿಗೆ ಸಂದಿವೆ. ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 72 ವಿಕೆಟ್‌ಗಳನ್ನು 65 ಪಂದ್ಯಗಳಿಂದ ಪಡೆದಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 758 ವಿಕೆಟ್‌ಗಳನ್ನು ಅವರು ಕಿತ್ತಿರುವುದು ಅವರ ವಿಕ್ರಮಕ್ಕೆ ಕನ್ನಡಿ ಹಿಡಿಯುತ್ತದೆ.

ಅಶ್ವಿನ್ ಕುಟುಂಬಸ್ಥ. ಇಬ್ಬರು ಮಕ್ಕಳ ಮುದ್ದಿನ ತಂದೆ. ನಗು ಕೊಟ್ಟು, ನಗು ಪಡೆಯುವುದೇ ಬದುಕು ಎಂದು ಭಾವಿಸಿರುವ ಅವರು ಯೂಟ್ಯೂಬರ್ ಕೂಡ ಹೌದು. ಐಪಿಎಲ್‌ನಲ್ಲಿ ಎಷ್ಟು ಸಾಧ್ಯವೋ ಅಷ್ಟೂ ಕಾಲ ಆಡುವ ಬಯಕೆಯನ್ನು ಅವರು ಉಳಿಸಿಕೊಂಡಿದ್ದಾರೆ. ಮುಂದೆ... ಏನೇ ಆಗಲಿ; ಅವರು ಹೀಗೆ ವಿದಾಯ ಹೇಳಲು ಕ್ರಿಕೆಟ್ ಚಾವಡಿಯು ಬಿಡಬಾರದಿತ್ತು.

ಪ್ರತಿಕ್ರಿಯಿಸಿ: feedback@sudha.co.in